# ಮಕ್ಕಳ ಟ್ರೆಂಡಿಂಗ್ ಉಡುಪು

ಕೋಆರ್ಡ್ ಸೆಟ್, ಮಿನಿ ಎಥ್ನಿಕ್ ವೇರ್ (ಸಾಂಪ್ರದಾಯಿಕ ಮತ್ತು ಪಾಶ್ಚಾತ್ಯ ಶೈಲಿಯ ಮಿಶ್ರಣ) ಹುಡುಗಿಯರಿಗೆ– ಪಲಾಜೊ ಪ್ಯಾಂಟ್ ಜೊತೆ ಕ್ರಾಪ್ ಟಾಪ್ ಹಾಗೂ ದುಪಟ್ಟಾ. ಹುಡುಗರಿಗೆ ಕುರ್ತಾ ಜೊತೆ ಡೆನಿಮ್ ಪ್ಯಾಂಟ್, ಡೆನಿಮ್ ಓವರ್‌ಆಲ್ಸ್, ಕಾರ್ಟೂನ್ ಮತ್ತು ಸೂಪರ್ ಹೀರೋ ಥೀಮ್ ಉಡುಪುಗಳು. ಸ್ಪೈಡರ್‌ಮ್ಯಾನ್, ಫ್ರೋಜನ್, ಪೆಪ್ಪಾ ಪಿಗ್, ಪೋಕೆಮಾನ್ ಇತ್ಯಾದಿ ಪ್ರಿಂಟ್‌ಗಳ ಟೀ ಶರ್ಟ್, ಫ್ರಾಕ್, ಫ್ಲೋರಲ್ ಪ್ರಿಂಟ್, ಲೇಸ್, ಫ್ರಿಲ್ ಇರುವ ಹಗುರ ಉಡುಪುಗಳು. ಜಾಗರ್ ಪ್ಯಾಂಟ್ ಮತ್ತು ಹುಡಿ ಸೆಟ್‌ಗಳು. ಅನಿಮಲ್ ಪ್ರಿಂಟ್ ಮತ್ತು ನೇಚರ್ ಥೀಮ್ ಬಟ್ಟೆಗಳು.



ಬಿಸಿಲಿನ ದಿನಗಳಲ್ಲೂ ಇಂತಹ ಬಟ್ಟೆಗಳು ಮಕ್ಕಳಿಗೆ ತುಂಬಾ ಸೂಕ್ತ.

- ಬಣ್ಣಗಳು ಮಕ್ಕಳ ಮನಸಿನಲ್ಲಿ ಸೃಜನಶೀಲತೆಯನ್ನು ಬೆಳೆಸುತ್ತದೆ ಮತ್ತು ಅವರ ಚುರುಕುತನವನ್ನು ಹೆಚ್ಚಿಸುತ್ತದೆ ಎಂದು ತಜ್ಞರು ಹೇಳುತ್ತಾರೆ. ಸಾಮಾನ್ಯವಾಗಿ ಗುಲಾಬಿ, ಹಸಿರು, ನೀಲಿ, ಹಳದಿಯಂತಹ ಬಣ್ಣದ ಬಟ್ಟೆಗಳು ಸೂಕ್ತ.
- ಪುಟ್ಟ ಮಕ್ಕಳಿಗೆ ಬಟ್ಟೆ ಆಯ್ಕೆ ಮಾಡಿಕೊಳ್ಳುವಾಗ ಅವು ಸುಲಭವಾಗಿ ಹಾಕಲು ಮತ್ತು ತೆಗೆಯಲು ಬರುವಂತಿರಬೇಕು. ಜಿಪ್ ಇರುವ ಉಡುಗೆ ಹಾಕುವಾಗ ಹೆಚ್ಚು ಜಾಗೃತೆ ವಹಿಸಿ.

## ಟೀ ಶರ್ಟ್ ಹಾಗೂ ಪ್ಯಾಂಟ್‌ಗಳು

ಈ ಉಡುಪು ಹುಡುಗರು ಹಾಗೂ ಹುಡುಗಿಯರಿಗೂ ಸೂಕ್ತ. ಹಲವಾರು ಬಗೆಯ ಟಾಪ್‌ಗಳು ಹಾಗೂ ಅದಕ್ಕೆ ತಕ್ಕಂತೆ ಪ್ಯಾಂಟ್‌ಗಳು, ಶಾರ್ಟ್ಸ್‌ಗಳು ಮಕ್ಕಳಿಗೆ ಹೆಚ್ಚು ಆರಾಮದಾಯಕ. ತುಂಬು ತೋಳಿನ ಹಾಗೂ ಅರ್ಧ ತೋಳಿನ ಟೀ ಶರ್ಟ್‌ಗಳನ್ನು ಯಾವುದೇ ಸಂದರ್ಭದಲ್ಲಿಯೂ ಧರಿಸಬಹುದು. ಕಾಟನ್, ಜೀನ್ಸ್ ಹಾಗೂ ಕಾರ್ಗೋ ಪ್ಯಾಂಟ್‌ಗಳು ಟ್ರೆಂಡಿಂಗ್‌ನಲ್ಲಿವೆ. ಹುಡುಗಿಯರಿಗೆ ಜಂಪ್‌ಸೂಟ್‌ಗಳು ಈಗ ಜನಪ್ರಿಯ.

## ಫ್ರಾಕ್

ರೇಷ್ಮೆ, ಹತ್ತಿ ಹಾಗೂ ನೆಟ್ಟೆಡ್ ಸೇರಿದಂತೆ ಹಲವು ವೈವಿಧ್ಯದಲ್ಲಿ ಹುಡುಗಿಯರ ಫ್ರಾಕ್ಸ್ ಸಿಗುತ್ತವೆ. ಆಯಾ ಸಂದರ್ಭಕ್ಕೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಬಹುದು. ಏ–ಲೈನ್ ಫ್ರಾಕ್ಸ್, ಟ್ಯುನಿಕ್ಸ್, ಪಿನಾಫೊರ್, ಪ್ರಿಂಟೆಡ್ ಕಾಟನ್ ಫ್ರಾಕ್, ಪಾರ್ಟಿವೇರ್, ಡಿಸೈನರ್ ಫ್ರಾಕ್, ಲೇಯರ್ಡ್ ಫ್ರಾಕ್ಸ್, ನೀ ಲೆಂತ್ ಸೇರಿದಂತೆ ಹಲವು ಬಗೆಯ ಫ್ರಾಕ್ಸ್ ಹೆಣ್ಣು ಮಕ್ಕಳಿಗಾಗಿ ಮಾರುಕಟ್ಟೆಯಲ್ಲಿವೆ.

## ಸಾಂಪ್ರದಾಯಿಕ ಉಡುಪು

ಹಬ್ಬದಂತಹ ವಿಶೇಷ ಸಂದರ್ಭಗಳಲ್ಲಿ ಹುಡುಗ, ಹುಡುಗಿಯರಿಬ್ಬರಿಗೂ ಬಹಳ ವಿಧದ ಬಟ್ಟೆಗಳ ಆಯ್ಕೆಗಳಿವೆ. ಹುಡುಗಿಯರಿಗೆ ಪಟ್ಟು ಪಾವಡೆ, ದಾವಣಿ ಲಂಗ, ಪುಟ್ಟ ಸೀರೆಗಳು, ಗೌನ್, ಸಲ್ವಾರ್, ಗಾಗ್ರಾ ಚೋಲಿ, ಪಟಿಯಾಲ ಶೈಲಿಯ ಸೂಟ್, ಫ್ರಾಕ್ ಹಾಗೂ ಚೂಡಿದಾರಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಮಿರರ್ ವರ್ಕ್, ಗೋಟಾಪಟ್ಟಿ ಹಾಗೂ ಎಂಬ್ರಾಯ್ಡರಿ ವಿನ್ಯಾಸವು ಚೆನ್ನಾಗಿರುತ್ತದೆ. ಹುಡುಗರಿಗೆ ಕುರ್ತಾ ಪೈಜಾಮಾ, ಪಟ್ಟು ಧೋತಿ, ಶೇರ್ವಾನಿ ಬಟ್ಟೆಗಳ ಆಯ್ಕೆಯಿದೆ. ರೆಡಿಮೇಡ್ ಪಂಚೆ ಹಾಗೂ ಶರ್ಟ್‌ನೊಂದಿಗೆ ಶಲ್ಯ ಧರಿಸಿದರೆ ಮಕ್ಕಳು ಇನ್ನೂ ಚೆನ್ನಾಗಿ ಕಾಣುತ್ತಾರೆ. ಕುರ್ತಾ ಪೈಜಾಮಕ್ಕೆ ವೈಸ್ಟ್ ಕೋಟ್ ಧರಿಸಿದರೆ ಇನ್ನೂ ಉತ್ತಮ. ಖಾದಿ ಮತ್ತು ಕಾಟನ್ ಕುರ್ತಾಗಳೂ ಚೆಂದ. ಅಲ್ಲದೆ ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತದೆ.

## ಒಂದೇ ಬಣ್ಣದಲ್ಲಿ ಇಡೀ ಕುಟುಂಬ!

ತಾಯಿ–ಮಗು, ತಂದೆ–ಮಗು ಒಂದೇ ಡಿಸೈನ್ ಉಡುಪು ಧರಿಸುವುದು. ಒಂದೇ ಬಣ್ಣವನ್ನು ಆಯ್ಕೆ ಮಾಡಿಕೊಳ್ಳುವುದು ಅಥವಾ ಒಂದೇ ತೆರನಾದ ಬಟ್ಟೆಯಲ್ಲಿ ಅಮ್ಮನ ಸೀರೆ, ಅಪ್ಪನ ಶರ್ಟ್ ಹಾಗೂ ಮಗುವಿನ ಬಟ್ಟೆಯನ್ನು ಹೊಲಿಸುವುದು ಈಗ ಟ್ರೆಂಡಿಂಗ್‌ನಲ್ಲಿದ್ದು, ಫೋಟೊಶೂಟ್‌ಗೆ ಉತ್ತಮ. ಮಕ್ಕಳ ಹುಟ್ಟುಹಬ್ಬದ ಸಂದರ್ಭಗಳಲ್ಲಿಯೂ ವಿಶೇಷವಾಗಿರುತ್ತದೆ.

## ಅನಾರ್ಕಲಿ ಗೌನ್

ಹುಡುಗಿಯರ ಅನಾರ್ಕಲಿ ಗೌನ್ ಯಾವಾಗಲೂ ಟ್ರೆಂಡಿಂಗ್‌ನಲ್ಲಿರುತ್ತವೆ. ನಾನಾ ವಿಧದ ಬಟ್ಟೆಯಲ್ಲಿ ರೆಡಿಮೇಡ್ ಗೌನ್ ಸಿಗುತ್ತವೆ. ನೆಟ್ ಗೌನ್‌ಗಳು ಸಿಂಡ್ರೆಲ್ಲಾ ಲುಕ್ ಕೊಡುತ್ತವೆ. ಅಮ್ಮನ ಸೀರೆಯಲ್ಲೂ ಮುದ್ದಾದ ಗೌನ್ ಹೊಲಿಸಬಹುದು. ಮಾರುಕಟ್ಟೆಯಲ್ಲಿ ಬಟ್ಟೆ ಕೊಂಡೂ ಬೇಕಾದ ವಿನ್ಯಾಸದಲ್ಲಿ ಗೌನ್ ಹೊಲಿಸಿಕೊಳ್ಳಬಹುದು. ■